

# ರಾಯಚೂರಿನ ಖಾಜನಗೌಡ ಬಂಗಲೆ

ಸಾಹಿತ್ಯಿಕ, ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಕಲಾತ್ಮಕತೆಯ ವೈಶಿಷ್ಟ್ಯ ರಾಯಚೂರು ಜಿಲ್ಲೆಯದ್ದು. ಇದಕ್ಕೆ ಒಂದು ನಿದರ್ಶನದಂತಿದೆ ಈ ಖಾಜನಗೌಡನ ಬಂಗಲೆ.

ರಾಯಚೂರು ನಗರದ ಪಟೇಲ್ ರಸ್ತೆಯ ಮಡ್ಡಿಪೇಟೆಯಲ್ಲಿ ಕಾಣಸಿಗುವ ಈ ಬೃಹತ್ ಬಂಗಲೆ ಎರಡು ಶತಮಾನಗಳಷ್ಟು ಪುರಾತನದ್ದು. ಅಂದಿನ ಕಾಲದ ಖಾಜನಗೌಡರಿಗೆ ಸೇರಿದ ಈ ಬಂಗಲೆ ಮೂರು ಅಂತಸ್ತಿನಿಂದ ಕೂಡಿದ್ದು, ಒಂಬತ್ತು ಅಂಕಣಗಳನ್ನು ಹೊಂದಿದೆ. ಬಿಸಿಲಿಗೆ ಹೆಸರುವಾಸಿಯಾದ ಈ ಊರಲ್ಲಿ, ಬಂಗಲೆಯು ನೈಸರ್ಗಿಕ ಹವಾನಿಯಂತ್ರಣ ಹೊಂದಿದ್ದು, ಕಡುಬೇಸಿಗೆಯಲ್ಲೂ ತಂಪಾಗಿರುತ್ತದೆ.

# ಕಂಡಿರಾ ಶ್ವೇತವರ್ಣಿ ಗಾರ್ದಭನ?

ಈಚೆಗೊಂದು ಮುಂಜಾನೆ ಮನೆಯ ಮುಂದಿನ ಟಾರ್ ರಸ್ತೆಯಲ್ಲಿ ಟೆಂಗುರಿಗಳ ಮಹಾಹಿಂಡು ಹಳ್ಳವೊಂದು ಮೈದುಂಬಿ ಹರಿಯುವಂತೆ ಸಾಗುತ್ತಿತ್ತು. ಆ ಮಹಾಹಿಂಡಿನ ಮಧ್ಯದಲ್ಲಿ ಶ್ವೇತ ವರ್ಣದ ಗಾರ್ದಭವೊಂದು ನವವಧುವಿನಂತೆ ನಾಚಿ ತಲೆಬಾಗಿಸಿ ಹೆಜ್ಜೆಹಾಕುತ್ತಿತ್ತು. ವ್ಹಾ! ಎಷ್ಟು ಸುಂದರ ಕುದುರೆ ಎಂದು ನಾನಂದುಕೊಳ್ಳುತ್ತಿರುವಾಗಲೇ ಅದೂ ಒಂದೆರಡು ಬಾರಿ ಅರಚಿತು. ಅರೇ ಏನಿದು? ಕೆನೆಯಬೇಕಾದ ಕುದುರೆ ಕತ್ತೆಯಂತೆ ಅರಚುತ್ತಿದೆಯಲ್ಲಾ ಎಂದು ತುಸು ಸೂಕ್ಷ್ಮವಾಗಿ ಗಮನಿಸಿದಾಗ ಅದು ಕುದುರೆಯಲ್ಲ ಕತ್ತೆಯೆಂದು ಅರಿವಾಯಿತು.

ಕಂದುಬಣ್ಣದ ಇಲ್ಲವೇ ಕಪ್ಪು ವರ್ಣದ ಗಾರ್ದಭಗಳನ್ನೇ ಕಂಡಿದ್ದ ನನಗೆ ಈ ಸುರಸುಂದರಾಂಗ ಶ್ವೇತವರ್ಣಿ, ಗಂಧರ್ವಲೋಕದಿಂದ ನೇರವಾಗಿ ರಸ್ತೆಗೆ ಇಳಿದಿದೆಯೇನೋ ಎಂದನಿಸಿತು. ಕುರಿಹಿಂಡಿನಲ್ಲಿ ಈ ಸುಂದರಿಗೇನು ಕೆಲಸ ಎಂದು ಕುರಿಗಾಹಿಯನ್ನೇ ಕೇಳಿದೆ. ಅದಕ್ಕವರು, ‘ಸಾಮಿ, ರಾತ್ರಿ ಅಟ್ಟಿತಾಗ ಚಿರತಿತ್ವಾಳ ಬಂದುಬುಟ್ರ ನಾಯಿಗಿಂತ ಮದಲಾ ಕತ್ತಿಗೆ ಗೊತ್ತಾಕೇತಿ. ಅದು ಕೂಗಿ ನಮ್ಮನ್ನು ಎಬ್ಬುಸ್ತಾತಿ. ಅದಕಾ ಇದನ್ ಮೇಸ್ತೀವಿ’ ಎಂದ. ಅಬ್ಬಾ ಕತ್ತೆಗೆ ಇಷ್ಟೊಂದು ಸೂಕ್ಷ್ಮತೆ ಇದೆಯಲ್ಲಾ ಎಂದು ಅಚ್ಚರಿಯಾಯಿತು. ಜೊತೆಗೆ ಕತ್ತೆಯ ಹಾಲಿಗೆ ಬೇಡಿಕೆ ಬಂದಿರುವುದೂ ಸಹ ನೆನಪಿಗೆ ಬಂದು, ಹಾಲಷ್ಟೇ ಅಲ್ಲ, ಕತ್ತೆಯೂ ಬೆಳ್ಳಗಿದೆ ಎನ್ನುವಂತಾಯಿತು. ಅಷ್ಟರಲ್ಲೇ, ಸಾಗುತ್ತಿದ್ದ ಹಿಂಡಿನಿಂದ ಒಂದರೆಕ್ಷಣ ಹಿಂತಿರುಗಿ ನೋಡಿದ ಅದರ ದೃಷ್ಟಿಯಲ್ಲಿ ‘ನನ್ನನ್ನು ನೋಡಿ ಅದೃಷ್ಟ ಬರುತ್ತದೆ’ ಎಂಬ ಕುಹಕವೂ ಇದ್ದಂತೆ ತೋರಿತು.

**–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ**



# ತಿಮ್ಮಪ್ಪನಿಗೆ ತಲೆನೋವಂತೆ



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ತಿಮ್ಮಲಾಪುರದ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದ ರಥೋತ್ಸವ ಪ್ರತಿ ಮಾರ್ಗಶಿರ ಮಾಸ, ಶುಕ್ಲ ಪಕ್ಷ, ಹುಣ್ಣಿಮೆಯಂದು ಸಾವಿರಾರು ಜನ ಭಕ್ತರ ಸಮೂಹದೊಂದಿಗೆ ವಿಜೃಂಭಣೆಯಿಂದ ಜರುಗುತ್ತದೆ. ಒಂದು ವಾರ ಈ ಜಾತ್ರೆ ನಡೆಯುತ್ತದೆ.

ಆದರೆ ಜಾತ್ರೆ ವೇಳೆ ಸೇರುವ ಅಸಂಖ್ಯ ಬಾಲಾಜಿ ಭಕ್ತರಿಂದ ಮೊಳಗುವ ‘ಗೋವಿಂದಾ... ಗೋವಿಂದಾ...’ ಘೋಷ, ಅನೂಚಾನ ಗಂಟೆ ಬಡಿತ, ಅರ್ಚಕರ ಪ್ರತಿ ನಿಮಿಷಕ್ಕೊಮ್ಮೆಯ ಮಂಗಳಾರತಿ ಇತ್ಯಾದಿಯಿಂದ ಸಂಕಟಹರ ವೆಂಕಟನಿಗೆ ತಲೆನೋವು ಬರುತ್ತದಂತೆ! ಇದು ಇಲ್ಲಿನ ಜನರ ನಂಬಿಕೆ. ತೇರಿನ ಮಾರನೆಯ ದಿನ ದೇವರಿಗೆ ಮಂಗಳಕರ ಮಜ್ಜನಗೈದು ಶುಭ್ರ ವಸನ ತೊಡಿಸಿ ಏನೊಂದೂ ಅಲಂಕಾರ ಮಾಡದೆ ತಲೆಗೆ ಉದ್ದನೆಯ ಶಾಲೊಂದನ್ನು ಬಿಗಿಯಾಗಿ ಸುತ್ತುತ್ತಾರೆ. ಅಂದು ಯಾರೂ ಗಂಟೆ ಬಾರಿಸುವಂತಿಲ್ಲ. ಗಂಟೆಯನ್ನು ಕಟ್ಟಿ ಇಟ್ಟಿರುತ್ತಾರೆ. ಅರ್ಚಕರು ಕಾಯಿ ಒಡೆಯುವಂತಿಲ್ಲ. ಶ್ಲೋಕವನ್ನೂ ಜೋರಾಗಿ ಹೇಳುವಂತಿಲ್ಲ, ಗುನುಗುನಿಸಬೇಕಷ್ಟೇ. ಮೈಕ್‌ಸೆಟ್ ಆನ್ ಮಾಡುವಂತಿಲ್ಲ. ಭಕ್ತರು ಮೌನ ಕಾಪಿಡಬೇಕು. ಎಲ್ಲೆಡೆ ನೀರವ ಮೌನ. ಹೀಗೆ ಮಾಡುವುದರಿಂದ ತಿಮ್ಮಪ್ಪನಿಗೆ ಬಂದ ತಲೆನೋವು ಮಾಯವಾಗುತ್ತದೆಂಬುದು ಇಲ್ಲಿನ ನಂಬಿಕೆ. ದಶಕಗಳಿಂದ ಈ ಸಂಪ್ರದಾಯ ನಡೆದುಬಂದಿದೆ.

**–ಕೆ. ಆದಿತ್ಯ ಹೆಬ್ಬಾರ್. ಹರಪನಹಳ್ಳಿ**